ಓ ಎಸ್ ನಂ.34/2023
ಡಿ.ಡಬ್ಲ್ಯೂ-1 ಸೋಮನಾಥ ತಂದೆ ಅಂಬಾರಾಯ ಕೋಳಕೂರ

**(ಇಂದು ದಿನಾಂಕಃ 24-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಎನ್ ಎನ್ ವಕೀಲರ ಪರ ಶ್ರೀ ಎಸ್ ಎನ್ ಪಿ ವಕೀಲರಿಂದ.

ನಮ್ಮ ತಂದೆಗೆ ಸರ್ವೆ ನಂಬರ ೧೦೦ ರಲ್ಲಿ ೧೦ ಎಕರೆ ಜಮೀನು ಬಂದಿರುತ್ತದೆ. ಸರ್ವೆ ನಂಬರ ೩೧ ರಲ್ಲಿ ೭ ಎಕರೆ ಮೇಲೆ ಗುಂಟೆ ಜಮೀನು ಕೂಡಾ ನಮ್ಮ ತಂದೆಯ ಪಾಲಿಗೆ ಬಂದಿರುತ್ತದೆ. ಮನೆಯಲ್ಲೂ ಕೂಡಾ ನಮ್ಮ ತಂದೆಗೆ ಮತ್ತು ದೊಡ್ಡಪ್ಪನಿಗೆ ಪಾಲು ಬಂದಿರುತ್ತದೆ. ನಮ್ಮ ತಂದೆಯ ಪಾಲಿಗೆ ಬಂದ ಆಸ್ತಿಗಳನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ ೧೦೦/೨ ನಮ್ಮ ಕಾಕಾರಾದ ಬಸಪ್ಪರವರ ಪಾಲಿಗೆ ಬಂದಿದೆ ಎಂದರೆ ಸರಿ. ನಮ್ಮ ತಂದೆ ಅಂಬಾರಾಯರವರಿಗೆ ಸರ್ವೆ ನಂಬರ ೧೦೦/೨ ರಲ್ಲಿ ೬ ಗುಂಟೆ ಜಮೀನು ಬಂದಿದೆ ಎಂದರೆ ಸರಿ. ನಮ್ಮ ತಂದೆಗೆ ಸರ್ವೆ ನಂಬರ ೩೧ ರಲ್ಲಿ ನಮ್ಮ ತಂದೆಗೆ ೫ ಎಕರೆ ೨೯ ಗುಂಟೆ ಜಮೀನು ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ೭ ಎಕರೆ ಜಮೀನು ಬಂದಿದೆ ಎನ್ನುತ್ತಾರೆ. ಸರ್ವೆ ನಂಬರ ೩೧/೫ ರಲ್ಲಿ ೨ ಎಕರೆ ಜಮೀನು ನಮ್ಮ ತಂದೆಯ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದಕ್ಕಿಂತ ಹೆಚ್ಚಿನ ಜಮೀನು ಬಂದಿದೆ ಎನ್ನುತ್ತಾರೆ.

೨. ಸರ್ವೆ ನಂಬರ ೧೦೦/ಅ ದಲ್ಲಿ ೩ ಎಕರೆ ೨೪ ಗುಂಟೆ ಜಮೀನು ನಮ್ಮ ತಂದೆಯೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ ೩೧/೫ ರಲ್ಲಿ ೨೦ ಗುಂಟೆ ಕೆನಾಲ್ ಸಲುವಾಗಿ ಜಮೀನು ಸ್ವಾಧೀನಗೊಂಡಿದೆ ಎಂದರೆ ಸರಿ. ಸರ್ವೆ ನಂಬರ ೩೧/೨ ರಲ್ಲಿ ೩೩

ಗುಂಟೆ ಜಮೀನು ಕೆನಾಲ್ ಗಾಗಿ ಸ್ವಾಧೀನಗೊಂಡಿದೆ ಎಂದರೆ ಸರಿ. ಸದರಿ ಪರಿಹಾರದ ಹಣವನ್ನು ನಾನೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಇನ್ನೂ ಪರಿಹಾರದ ಹಣ ಬಂದಿರುವುದಿಲ್ಲ ಎನ್ನುತ್ತಾರೆ. ಮಲ್ಲಿಕಾರ್ಜುನ ನನ್ನ ತಂಗಿಯ ಮಗ ಎಂದರೆ ಸರಿ. ನಾನು ಸದರಿ ಮಲ್ಲಿಕಾರ್ಜುನರವರಿಗೆ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಖರೀದಿ ಪತ್ರಕ್ಕೆ ವಾದಿ ನಿಂಗಪ್ಪರವರ ಸಹಿಯನ್ನು ಪಡೆದಿರುವುದಿಲ್ಲ. ಸಾಕ್ಷಿಯು ನನ್ನ ಹೆಸರಿನಿಂದ ಇದ್ದುದರಿಂದ ನಾನೆ ಮಾರಾಟ ಮಾಡಿರುತ್ತೇನೆ ಎನ್ನುತ್ತಾರೆ.

೩. ವಾದಿ ನಿಂಗಪ್ಪರವರಿಗೆ ಸರ್ವೆ ನಂಬರ ೧೦೦ ರಲ್ಲಿ ೭ ಎಕರೆ ಜಮೀನು ಬಂದಿತ್ತು, ಅದು ನಮ್ಮ ಹಿರಿಯರ ಹೆಸರಿನಲ್ಲಿ ಇತ್ತು. ಅದನ್ನು ಮಾರಾಟ ಮಾಡಿ ಅದರಿಂದ ಬಂದ ಹನವನ್ನು ನಿಂಗಪ್ಪರವರಿಗೆ ನೀಡಲಾಗಿರುತ್ತದೆ. ಆ ಕುರಿತು ಯಾವುದೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಹೇಳಿದಂತೆ ವಾದಿ ನಿಂಗಪ್ಪರವರಿಗೆ ಯಾವುದೆ ಹಣ ಮಾರಾಟ ಮಾಡಿ ನೀಡದೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೪. ನನ್ನ ದೊಡ್ಡಪ್ಪರಾದ ಬಸಣ್ಣರವರ ಹೆಸರಿನಲ್ಲಿದ್ದ ಜಮೀನು ಮಾರಾಟ ಮಾಡಿ, ವಾದಿ ನಿಂಗಪ್ಪರವರಿಗೆ ಹಣ ನೀಡಲಾಗಿರುತ್ತದೆ. ನಾನು ಓ ಎಸ್ ನಂಬರ ೬೦/೨೦೨೩ ಎಂಬ ದಾವೆ ಹಾಕಿದ್ದೆ ಎಂದರೆ ಸರಿ. ನಾನು ಪಾಲು ಕೇಳಿ ನನ್ನ ಅಣ್ಣ ಮತ್ತು ತಂಗಿಯ ಮೇಲೆ ಸದರಿ ಕೇಸನ್ನು ಹಾಕಿದ್ದೆ ಎಂದರೆ ಸರಿ. ಸರ್ವೆ ನಂಬರ ೩೦/೨ ರ ೧ ಎಕರೆ ೨೦ ಗುಂಟೆ ಜಮೀನಿನ ಕುರಿತು ಸದರಿ ದಾವೆ ಹಾಕಿದ್ದೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರನಾದ ವಾದಿ ಮತ್ತು ನನ್ನ ಸಹೋದರಿಯಾದ ೨ನೇ ಪ್ರತಿವಾದಿಯ ನಡುವೆ ಯಾವುದೆ ಪಾಲು ಆಗದೆ ಇದ್ದರೂ ಸಹ ಪಾಲು ಆಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಆಸ್ತಿ ನೀಡಬಾರದು ಎಂಬ ಉದ್ದೇಶದಿಂದ ಪಾಲು ಆಗಿದೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದುದರಿಂದ ಎಲ್ಲಾ ಆಸ್ತಿಯನ್ನು ಹೆಸರಿಗೆ ಮಾತ್ರ ನನ್ನ ಹೆಸರಿನಲ್ಲಿ ಇಡಲಾಗಿತ್ತು ಎಂದರೆ ಸರಿಯಲ್ಲ. ಕಲಬುರಗಿಯಲ್ಲಿರುವ ಮನೆಯನ್ನು ವಾದಿ ಬ್ಯಾಂಕಿನಲ್ಲಿ ಸಾಲ ಪಡೆದು, ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಜಮೀನು ಮಾರಾಟ ಮಾಡಿದ ಹಣದಿಂದ ಅದನ್ನು ಕಟ್ಟಿರುತ್ತಾರೆ ಎನ್ನುತ್ತಾರೆ.

೫. ಸರ್ವೆನಂಬರ ೩೧/೩ ರ ಜಮೀನನ್ನು ವಾದಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಂದ ನನ್ನ ತಂಗಿಯ ಮಗನಾದ ೫ನೇ ಪ್ರತಿವಾದಿ ಮಲ್ಲಿಕಾರ್ಜುನರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸಾಲ ಆಗಿದ್ದರಿಂದ ನಾನು ಮಾರಿರುತ್ತೇನೆ ಎನ್ನುತ್ತಾರೆ. ನನಗೆ ಸಾಲ ಇದ್ದ ಕುರಿತು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ವಾದಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ಒಂದು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.